ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

# ಸಹ ಪಯಣ



ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ ೩೪ ಅಗಸ್ಟ್ ೨೦೧೫ ಸಂಚಿಕೆ ೪



ನಾನು ಯಾವುದೇ ನೇತಿ ಪ್ರಜ್ಞೆಯ ಭಾರತೀಯ ತತ್ತ್ವದರ್ಶನದ ಬಗ್ಗೆ, ಏನೂ ಮಾಡದಿರುವುದರ ಬಗ್ಗೆ ಮಾತನಾಡುತ್ತಿಲ್ಲ. ನೀವಾದರೋ ಏನಾದರೂ ಮಾಡಬೇಕೆಂಬ ಪಾಶ್ಚಾತ್ಯ ವಿಚಾರ ಧಾರೆಯವರು. ನಾನು ಅದರ ಬಗ್ಗೆ ಮಾತನಾಡುತ್ತಿಲ್ಲ. ನಾವು ಮಾತನಾಡುತ್ತಿರುವುದು ಸಂಪೂರ್ಣ ಭಿನ್ನವಾದುದು. ಮನಸ್ಸನ್ನು ತಾಜಾ ಆಗಿಟ್ಟುಕೊಳ್ಳಬೇಕು. ಅದನ್ನು ಮುಗ್ಧವಾಗಿಸಬೇಕು. ಜ್ಞಾನ ಸಂಗ್ರಹಣೆ ಇದ್ದಲ್ಲಿ ಅಥವಾ ಗುರು ಹೇಳಿದ ಶಬ್ದಗಳ ಯಾಂತ್ರಿಕ ಪುನರುಚ್ಚಾರವಿದ್ದಲ್ಲಿ ಅಥವಾ ಯಾವುದೇ ಅಭ್ಯಾಸದ ಅಂತಿಮ ಫಲಿತಾಂಶವಿದ್ದಲ್ಲಿ ಮನಸ್ಸು ತಾಜಾ ಆಗಲಾರದು; ಮುಗ್ಧವಾಗಲಾರದು. ಮನಸ್ಸು ತನ್ನದೇ ಅನುಬಂಧನದ ಬಗ್ಗೆ ಜಾಗೃತವಾಗಲಾರದೆ?

TEACHINGS OF LIFE

# ಭದ್ರತೆ ಎಂಬುದೇನಾದರೂ ಇದೆಯೇ?

ಭದ್ರತೆ ಎಂಬುದೇನಾದರೂ ಇದೆಯೇ? ಎಂದು ಶೋಧಿಸಲು ವ್ಯಕ್ತಿ ಎಲ್ಲ ಅಧಿಕಾರದಿಂದ ಮುಕ್ತನಾಗಿರಬೇಕು. ಇದನ್ನು ಅರ್ಥಮಾಡಿಕೊಳ್ಳುವುದು ತುಂಬಾ ಮುಖ್ಯ; ಏಕೆಂದರೆ ಒಂದು ಶಾಶ್ವತವಾದ ಆಧ್ಯಾತ್ಮಿಕ ಅಸ್ತಿತ್ವ ಇದೆ ಎಂದು ಎಲ್ಲ ಧರ್ಮಗಳೂ ಪ್ರತಿಪಾದಿಸಿವೆ. ಅದನ್ನು ನೀವು ಆತ್ಮ ಅಥವಾ ಬೇರೇನೋ ಹೆಸರಿನಿಂದ ಕರೆಯುತ್ತೀರಿ. ನಾವು ಅದನ್ನು ಪ್ರಚಾರ, ಅನುಬಂಧನ, ನಮ್ಮದೇ ಭಯಗಳು, ಸುರಕ್ಷೆ ಬಗೆಗಿನ ನಮ್ಮದೇ ಆಗ್ರಹಗಳು ಇತ್ಯಾದಿಯಾಗಿ ಒಪ್ಪಿಕೊಂಡಿದ್ದೇವೆ. ನಾವು ಅದನ್ನು ಸುಖ ಕೊಡುವ ವಾಸ್ತವ, ಯಥಾರ್ಥ ಎಂದು ಸ್ವೀಕರಿಸಿದ್ದೇವೆ.

ಸುಪ್ತಪ್ರಜ್ಞೆಯು ಹಲವು ಸಾವಿರ ವರ್ಷಗಳ ಭೂತ. ಅದು ಜನಾಂಗದ, ಕುಟುಂಬದ, ಶೇಖರಗೊಂಡ ಜ್ಞಾನದ ಅವಶೇಷ. ಸುಪ್ತಪ್ರಜ್ಞೆ ಎಂಬುದು ನೀವು ಪ್ರಜ್ಞಾಪೂರ್ವಕ ನಿರಾಕರಿಸಬಹುದಾದ ಒಟ್ಟು ಪರಂಪರೆ; ಆದರೆ ಅದು ಇದೆ. ಕಷ್ಟಕ್ಕೊಳಗಾದಾಗ ಅದು ನಮಗೆ ಪ್ರಮಾಣವಾಗುತ್ತದೆ. ಆಗ 'ಚರ್ಚಿಗೆ ಹೋಗು, ಇದನ್ನು ಮಾಡು, ಅದನ್ನು ಮಾಡು, ಪೂಜೆ ಮಾಡು' ಎಂದು ಸುಪ್ತಪ್ರಜ್ಞೆ ನಮಗೆ ಹೇಳುತ್ತದೆ. ಸುಪ್ತಪ್ರಜ್ಞೆಯ ಗತಸಹಿತವಾದ ಈ ಸೂಚನೆ, ಈ ಸಲಹೆ ಪ್ರಮಾಣವಾಗುತ್ತದೆ, ಅದು ನಮ್ಮ ಅಂತಃಸಾಕ್ಷಿ, ಒಳದನಿ ಇತ್ಯಾದಿಯಾಗುತ್ತದೆ. ಹೀಗೆ ಇದೆಲ್ಲದರ ಬಗ್ಗೆ ನಾವು ಜಾಗೃತರಾಗಬೇಕು, ಅದನ್ನು ಅರಿಯಬೇಕು ಮತ್ತು ಅದರಿಂದ ಬಿಡುಗಡೆ ಗಳಿಸಬೇಕು.

ಒಂದು ವಿಚಾರದ ಜತೆ, ಜನಾಂಗದ ಜತೆ, ಸಮುದಾಯದ ಜತೆ, ಒಂದು ನಿರ್ದಿಷ್ಟ ಕಾರ್ಯದ ಜತೆ ನಮ್ಮನ್ನು ನಾವು ಗುರುತಿಸಿಕೊಂಡಾಗ ನಮ್ಮಲ್ಲಿ ಮಾನಸಿಕವಾಗಿ, ಭಾವನಾತ್ಮಕವಾಗಿ ಅಪಾರವಾದ ಭದ್ರತೆ ಕಂಡುಬರುತ್ತದೆ. ಅಂದರೆ, ನಾವು ಒಂದು ನಿರ್ದಿಷ್ಟ ಉದ್ದೇಶಕ್ಕೆ, ನಿರ್ದಿಷ್ಟ ರಾಜಕೀಯ ಪಕ್ಷಕ್ಕೆ, ಒಂದು ಬಗೆಯ ಚಿಂತನ ಕ್ರಮಕ್ಕೆ, ಕೆಲವೊಂದು ರೂಢಿಗಳಿಗೆ, ಕಟ್ಟು ಕಟ್ಟಳೆಗಳಿಗೆ, ಅಭ್ಯಾಸಗಳಿಗೆ, ಆಚರಣೆಗಳಿಗೆ ಹಿಂದೂಗಳಾಗಿ, ಪಾರ್ಸಿಗಳಾಗಿ, ಕ್ರಿಶ್ಚಿಯನ್ನರಾಗಿ, ಮುಸ್ಲಿಮರಾಗಿ ಬದ್ಧರಾಗುತ್ತೇವೆ.

ನಾವು ಒಂದು ಗುಂಪಿನ ಜತೆ, ಒಂದು ಸಮುದಾಯದ ಜತೆ, ಒಂದು ನಿರ್ದಿಷ್ಟ ವರ್ಗದ ಜತೆ ಅಥವಾ ಒಂದು ನಿರ್ದಿಷ್ಟ ವಿಚಾರದ ಜತೆ ಗುರುತಿಸಿಕೊಳ್ಳುತ್ತೇವೆ. ಈ ರಾಷ್ಟ್ರ, ಕುಟುಂಬ, ಗುಂಪು, ಸಮುದಾಯದ ಜತೆ ಗುರುತಿಸಿಕೊಳ್ಳುವಿಕೆಯಿಂದ ನಮ್ಮಲ್ಲಿ ಭದ್ರತೆಯ ಪ್ರಜ್ಞೆ ಮೂಡುತ್ತದೆ. 'ನಾನೊಬ್ಬ ಭಾರತೀಯ' ಅಥವಾ 'ನಾನೊಬ್ಬ ಇಂಗ್ಲಿಷ್‌ನವ' ಅಥವಾ 'ನಾನೋರ್ವ ಜರ್ಮನ್' ಎಂದು ನೀವು ಹೇಳುವಾಗ ನಿಮಗೆ ಹೆಚ್ಚು ಸುರಕ್ಷಿತ ಎಂದು ಭಾಸವಾಗುತ್ತದೆ.

ನಿಯಂತ್ರಿಸಬೇಕು ಅಥವಾ ನನಗೇಕೆ ಭಯವಾಗಲಾರದು? ಈ ಭಯಗಳಿಂದ ನನಗೇಕೆ ಮನೋವಿಕಾರಗಳಾಗಲಾರದು? ಎಂದು ನಾನು ಹೇಳುತ್ತೇನೆ. ಸದಾ ಇದರಲ್ಲಿ ವೈರುಧ್ಯಗಳಿರುತ್ತವೆ. ವಿಭಜನೆ ಇದೆ. ಹೀಗಾಗಿ ಶಕ್ತಿಯ ಅಪವ್ಯಯವಾದ ಸಂಘರ್ಷ ತಲೆದೋರುತ್ತದೆ. ಸಂಘರ್ಷ ಉಂಟಾದರೆ, ಅದರ ನಿಯಂತ್ರಣದಲ್ಲಿ, ಅದರಿಂದ ಓಡಿ ಹೋಗುವುದರಲ್ಲಿ, ಭಯದಿಂದ ಮುಕ್ತನಾಗುವುದು ಹೇಗೆ ಎಂದು ತಿಳಿಸಿ ಎಂದು ಇನ್ನೊಬ್ಬನನ್ನು ಕೇಳಲು ಹೋಗುವುದರಲ್ಲಿ ಶಕ್ತಿಯ ಅಪವ್ಯಯವಿದೆ. ಅವೆಲ್ಲ ಶಕ್ತಿವ್ಯಯದ ಅಂಶಗಳು.

---

ಕೃತಿ: ಜೀವನ ಪಾಠಗಳು
ಮೂಲ: **Teachings of life** (Learning about Pleasure)
ಅನುವಾದ: ಮಹಾಬಲೇಶ್ವರ ರಾವ್

**ಪ್ರಶ್ನೆ :** **ನಾನು ತುಂಬಾ ಅನುರಕ್ತನಿದ್ದೇನೆ. ವಿರಕ್ತಿಯನ್ನು ಬೆಳೆಸಿಕೊಳ್ಳುವುದು ತುಂಬಾ ಮುಖ್ಯವೆಂದು ಭಾವಿಸಿದ್ದೇನೆ. ಅನುರಕ್ತಿಯಿಂದ ಮುಕ್ತಿ ಎಂಬ ಈ ಭಾವವನ್ನು ನಾನು ಹೇಗೆ ಹೊಂದಲಿ?**

**ಕೃಷ್ಣಮೂರ್ತಿ:** ವಿರಕ್ತಿ ನಮ್ಮ ಸಮಸ್ಯೆಯಾ? ಅಥವಾ ಅನುರಕ್ತಿಯಾ? ಅನುರಕ್ತವಾಗಿರುವುದು ನೋವು ತರುತ್ತದೆ, ಹೀಗಾಗಿ ನಾವು ಅಂಟಿಕೊಳ್ಳದೆ ಇರಲು ಬಯಸುತ್ತೇವೆ. ಅನುರಕ್ತಿಯ ಒಟ್ಟು ಸಮಸ್ಯೆಯನ್ನು ನಾವು ಮೇಲು ಮೇಲಿನಿಂದ ನೋಡದೆ ಅದರ ಆಳಕ್ಕಿಳಿದು ನೋಡಿದರೆ, ಮತ್ತು ಅದರ ಮಹತ್ತ್ವವನ್ನು ಗಮನಿಸಿದರೆ ವಿರಕ್ತಿ ಎಂಬುದಕ್ಕಿಂತ ತೀರ ವಿಭಿನ್ನವಾದುದೇನೋ ಕಂಡುಬರುತ್ತದೆ.

ಆಸ್ತಿ, ಜನರು, ವಿಚಾರಗಳು, ನಂಬಿಕೆಗಳು ಇತ್ಯಾದಿಗಳಿಗೆ ನಾವೇಕೆ ಅಂಟಿಕೊಳ್ಳುತ್ತೇವೆ? ವಿವಿಧ ವಿಷಯಗಳಲ್ಲಿ ಅನುರಕ್ತರಾಗುವ ಅಸಂಖ್ಯ ರೂಪಗಳು ನಿಮಗೆ ಗೊತ್ತಿದೆ. ನಾವೇಕೆ ಅನುರಕ್ತರು? ನಾವು ಯಾವುದಾದರೊಂದಕ್ಕೆ, ನನ್ನ ಗೆಳೆಯ, ವಿಚಾರ, ಆಗಿ ಹೋದ ಅನುಭವ, ಮಗ, ಸೋದರ, ತಾಯಿ ಅಥವಾ ತೀರಿಕೊಂಡ ಹೆಂಡತಿಗೆ ಅಂಟಿಕೊಂಡಿರದಿದ್ದರೆ ಭಯದ ಪ್ರಜ್ಞೆ ನಮ್ಮನ್ನು ಕಾಡುತ್ತದಲ್ಲವೆ? ನಾವು ಅನುರಕ್ತರಾಗಿರದಿದ್ದರೆ ನಮ್ಮಲ್ಲಿ ಪ್ರೇಮವಿಲ್ಲ, ನಾವು ನಿಷ್ಠಾವಂತರಲ್ಲ ಎಂದು ಭಾವಿಸುವುದಿಲ್ಲವೆ? ಅನುರಕ್ತಿಯ ಮೂಲಕ ನಾವೇನೂ ಆಗಿಲ್ಲ ಎಂಬ ಆ ಅಸಾಧಾರಣ ಭಯ ಕೂಡಾ ಇರುವುದಲ್ಲವೆ? ಇದು ಸಮಸ್ಯೆ, ವಿರಕ್ತಿಯನ್ನು ಬೆಳೆಸುವುದು ಹೇಗೆ ಎಂಬುದಲ್ಲ; ನಾವು ವಿರಕ್ತಿಯನ್ನು ಬೆಳೆಸಿಕೊಂಡರೆ, ಆ ಬೆಳೆಸಿಕೊಳ್ಳುವಿಕೆ, ರೂಢಿಸುವಿಕೆಯೇ ಸಮಸ್ಯೆಯಾಗಿ ಮಾರ್ಪಡುತ್ತದೆ.

ದಯಮಾಡಿ ಇದನ್ನು ನೋಡಿ. ನಾನು ಅನುರಕ್ತನಾಗಿರುವೆ. ಆ ಅನುರಕ್ತಿ ಭಯದ, ವಿವಿಧ ಬಗೆಯ ಒಂಟಿತನದ, ಖಾಲಿತನದ ಫಲ. ನನಗೆ ಅದರ ಅರಿವಿದೆ, ಈ ಅನುರಕ್ತಿಯ ವೇದನೆಯೂ ನನಗೆ ಗೊತ್ತಿದೆ. ಹೀಗಾಗಿ ನಾನು ವಿರಕ್ತಿಯನ್ನು ರೂಢಿಸಲು ಯತ್ನಿಸುತ್ತೇನೆ. ನನ್ನ ಮನಸ್ಸು ವಿರಕ್ತಿಯಲ್ಲಿ ವಿರಕ್ತಿಯನ್ನು ಸಾಧಿಸುವುದು ಹೇಗೆ ಎಂಬುದರಲ್ಲಿ ತೊಡಗಿಕೊಂಡಿದೆ. ಈ ಒಟ್ಟು ಪ್ರಕ್ರಿಯೆ ಸಮಸ್ಯೆಯಾಗಿ ಪರಿಣಮಿಸುತ್ತದೆ; ಅಲ್ಲವೇ? ನಾನು ವಿರಕ್ತಿಯನ್ನು ಸಾಧಿಸಬಯಸುತ್ತೇನೆ. ಹೀಗಾಗಿ ಪರಿಣಾಮದಲ್ಲಿ ಮಗ್ನವಾದ ಮನಸ್ಸು, ವಿರಕ್ತಿ ಎಂಬ ವಿಚಾರದಲ್ಲಿ ಮಗ್ನವಾದ ಮನಸ್ಸು ಅದರ ಸಾಧನೆಯನ್ನು ಒಂದು ಸಮಸ್ಯೆಯನ್ನಾಗಿಸುತ್ತದೆ. ಆಮೇಲೆ ಸಂಘರ್ಷ ಉಂಟಾಗುತ್ತದೆ. ನಾನು ಅನುರಕ್ತನಿದ್ದೇನೆ, ನಾನು ವಿರಕ್ತನಾಗಬೇಕು. ಅಲ್ಲಿ ವೇದನೆಯಿದೆ, ಹೀಗಾಗಿ ನೋವು ಮತ್ತು ಭಯವಿಲ್ಲದ ಒಂದು ನಿರ್ದಿಷ್ಟ ಸ್ಥಿತಿಗೆ ತಲುಪಲು ಮಾಡುವ ಸತತವಾದ ಹೆಣಗಾಟವಿದೆ. ಆದರೆ ಅನುರಕ್ತಿಯನ್ನು ಗಮನಿಸುವುದಾದರೆ, ಅದರ ಬಗ್ಗೆ ಜಾಗೃತನಾದರೆ, ನೋವಿನಿಂದ ಮುಕ್ತವಾಗುವುದು ಹೇಗೆ ಎಂದು ಕೇಳದಿದ್ದರೆ ಅಥವಾ ಅನುರಕ್ತಿಯ ಒಟ್ಟು ಪರಿಣಾಮಗಳ ಬಗ್ಗೆ ಅರಿಯಲು ಮಾಡುವ ಹೆಣಗಾಟವಿಲ್ಲದೆ ಆಕಾಶದ ಅರಿವು ಇರುವ ಹಾಗೆ ಅದರ ಬಗ್ಗೆ ಅರಿವಿದ್ದರೆ ಆಗ ಸಮಸ್ಯೆ ಇರುವುದಿಲ್ಲ, ಆಗ ಮನಸ್ಸು ಅನುರಕ್ತಿ ಅಥವಾ ಅದರ ವಿರೋಧ ವಿರಕ್ತಿಯಲ್ಲಿ ಮಗ್ನವಾಗಿರುವುದಿಲ್ಲ. ಮನಸ್ಸು ಹೀಗೆ ಜಾಗೃತವಾಗಿರುವಾಗ, ಅನುರಕ್ತಿಯ ಒಟ್ಟು ಮಹತ್ತ್ವವನ್ನು ಅರ್ಥ ಮಾಡಿಕೊಳ್ಳಬೇಕು. ಆದರೆ ಯಾವುದೇ ಬಗೆಯ ಖಂಡನೆ, ಹೋಲಿಕೆ, ತೀರ್ಪು, ಬೆಲೆಕಟ್ಟುವಿಕೆ ಇದ್ದಲ್ಲಿ ನೀವು ಅನುರಕ್ತಿಯ ಅಂತರಂಗದ ಮಹತ್ತ್ವವನ್ನು ಅರಿಯಲಾರಿರಿ.

---

**ಕೃತಿ:** ಜೀವನ ಪಾಠಗಳು
**ಮೂಲ:** **Teachings of life** (What is a problem?)
**ಅನುವಾದ:** ಮಹಾಬಲೇಶ್ವರ ರಾವ್

ಅದು ಘನವಾಗಿತ್ತು. ಹಾಗಂತ ಅದಕ್ಕೆ ತೂಕ, ಪ್ರಮಾಣ ಇರಲಿಲ್ಲ. ಅದು ಅಲ್ಲಿ ಇತ್ತು; ಅದರ ಪಕ್ಕದಲ್ಲಿ ಏನೂ ಇರಲಿಲ್ಲ. ಅದು ಅನ್ಯವಿರದೆ ಅಲ್ಲಿತ್ತು. 'ಘನ', 'ಅಚಲ', 'ಅವಿನಾಶಿ' ಮುಂತಾದ ಪದಗಳು ಕಾಲಾತೀತ ಸ್ಥಿರತೆಯ ಗುಣವನ್ನು ನಮಗೆ ತಿಳಿಸಲಾರವು. ಇವು ಯಾವುವೂ ಅಥವಾ ಬೇರೆ ಯಾವುದೇ ಪದ ಅಲ್ಲಿರುವುದನ್ನು ಸರಿಯಾಗಿ ಅಭಿವ್ಯಕ್ತಿಸಲಾರದು.

ಜೆ ಕೃಷ್ಣಮೂರ್ತಿ



ನೀವು ಒಂದು ಮರವನ್ನು, ಆಕಾಶವನ್ನು ಅಥವಾ ಹಕ್ಕಿಯನ್ನು ಅಥವಾ ನಿಮ್ಮ ಹೆಂಡತಿ ಅಥವಾ ಗಂಡನ ಮುಖ ನೋಡಿದಾಗ ನಿಮ್ಮ ನಡುವೆ ಅಂತರ ಕಾಣಿಸುತ್ತದೆ. ಜನರ ನಡುವೆ ವಸ್ತುಗಳ ನಡುವೆ ಅಂತರವಿದೆ. ಅವಲೋಕನಕಾರನಿದ್ದಾನೆ, ಕೇಂದ್ರದಿಂದ ನೋಡುತ್ತಿರುವವನಿದ್ದಾನೆ. ಆದುದರಿಂದ ಅಂತರವಿದೆ. ನೀವು ಮರ ಅಥವಾ ಆಕಾಶ ಅಥವಾ ಇನ್ನೊಬ್ಬ ವ್ಯಕ್ತಿಯನ್ನು ನೋಡುವಾಗ ಕೇಂದ್ರವು ನೋಡುತ್ತಿದೆಯಲ್ಲವೆ? ಕೇಂದ್ರವೆಂದರೆ ಸ್ಮೃತಿ, ಅನುಭವ, ಜ್ಞಾನ, ಹೆಣಗಾಟ, ತೃಪ್ತಿಪಡಿಸಬೇಕೆಂಬ ಬೇಡಿಕೆ, ಯಶಸ್ಸಿನ ಬಯಕೆ ಇತ್ಯಾದಿ. ಅದು ಕೇಂದ್ರ, ಸ್ವ, ಅಹಂ 'ನಾನು'. ಆ ಕೇಂದ್ರದಿಂದ ಆ ಅವಲೋಕನಕಾರನೆಂಬ ವ್ಯಕ್ತಿಯಿಂದ, ನೀವು ಯಾವುದರ ಕಡೆಗೋ ನೋಡುತ್ತೀರಿ. ಹೀಗಾಗಿ ಅಲ್ಲಿ ಅವಲೋಕನಕಾರ ಮತ್ತು ಅವಲೋಕಿತದ ನಡುವೆ ಅಂತರ ಕಂಡು ಬರುತ್ತದೆ. ಅನುಭವಿ ಮತ್ತು ಅನುಭವಿಸಲ್ಪಟ್ಟದ್ದು ಅಥವಾ ಚಿಂತಕ ಮತ್ತು ಚಿಂತನೆಯ ನಡುವೆ ನೀವು 'ನಾನು ಇರಬೇಕು' ಅಥವಾ 'ನಾನು ಇರಬಾರದು' ಎಂದು ಹೇಳಿದರೆ ಅಲ್ಲಿ

ಸ್ಥಳಾವಕಾಶವಿದೆ, ಕಾಲದ ಅಂತರವಿದೆ ಎಂದು ಅರ್ಥ. ತನ್ನ ಸುತ್ತ ಸ್ಥಳಾವಕಾಶವನ್ನು ಸೃಜಿಸುವ ಅವಲೋಕನಕಾರನಿರಲು ವಿವಿಧ ಬಗೆಯ ಪುನರುಚ್ಚಾರ, ಪುನರುಕ್ತಿಗಳ ಮೂಲಕ ಆತ ಆ ಸ್ಥಳಾವಕಾಶಗಳನ್ನು ವಿಸ್ತರಿಸುತ್ತಾನೆ. ಆತ ಸ್ಥಳಾವಕಾಶವನ್ನು ವಿಸ್ತರಿಸಬಹುದು. ಆದರೆ ಅಲ್ಲಿ ಸದಾ ಕೇಂದ್ರವಿರುತ್ತದೆ. ಹೀಗಾಗಿ ಅವನ ಸ್ಥಳಾವಕಾಶದ ವಿಸ್ತರಣೆ ಎಂಬುದು ಸೆರೆಮನೆಯ ವಿಸ್ತರಣೆ.

ಶಬ್ದಗಳು, ಗೊಣಗಾಟಗಳು, ಅನುಭವಗಳು, ನೆನಪುಗಳು ಮತ್ತು ನಿನ್ನೆಗಳ ಒಟ್ಟು ಮಾನವ ದುಃಖ ನಮ್ಮ ಮನಸ್ಸುಗಳಲ್ಲಿ ತುಂಬಿಕೊಂಡಿದೆ. ನಾವು ಬದುಕನ್ನು ನೋಡುತ್ತಿರುವುದು ಈ ಕೇಂದ್ರದಿಂದಲೇ. ಆ ಸ್ಥಳಾವಕಾಶ ಬಹಳ ಸೀಮಿತ, ತೀರ ಅಗಲ ಕಿರಿದಾದದ್ದು, ಸಂಕುಚಿತ; ಅದೊಂದು ಸೆರೆಮನೆಯ ಹಾಗೆ. ತಾನೆ ಕಟ್ಟಿಕೊಂಡ ಕೇಂದ್ರದಿಂದ ಮನಸ್ಸನ್ನು ಬಿಡಿಸಲು ಸಾಧ್ಯವೇ? ನೀವು ಮರ, ಹಕ್ಕಿ, ನಿಮ್ಮ ಹೆಂಡತಿಯ ಅಥವಾ ಗಂಡನ ಅಥವಾ ನಿಮ್ಮ ಅಧಿಕಾರಿಯ ಮುಖ ಇತ್ಯಾದಿಯಾಗಿ ಬಿಂಬದ ಸಹಾಯವಿಲ್ಲದೆ ನೋಡಲು ಸಾಧ್ಯವಾದಾಗ ಮಾತ್ರವೇ ಇದು ಸಾಧ್ಯ. ನಿಮ್ಮ ಹೆಂಡತಿ ಅಥವಾ ಗಂಡನನ್ನು ನಿಮ್ಮಲ್ಲಿರುವ ಬಿಂಬಗಳ ನೆರವಿಲ್ಲದೆ ನೋಡಬಲ್ಲಿರಾ? ಬಿಂಬವಿಲ್ಲದೆ ಸುಮ್ಮನೆ ನೋಡಬಲ್ಲಿರಾ? ನೀವೆಂದಾದರೂ ಪ್ರಯತ್ನಿಸಿದ್ದೀರಾ? ಪ್ರಾಯಃ ನೀವು ಹಾಗೆ ಮಾಡಿಲ್ಲ. ನೀವು ಹಾಗೆ ಮಾಡಿದರೆ ನಿಮ್ಮ ಸಂಬಂಧವನ್ನು ಪುಡಿ ಪುಡಿ ಮಾಡುತ್ತೀರಿ. ಏಕೆಂದರೆ ನಾವು ಸಂಬಂಧ ಹೊಂದಿರುವುದು ಬಿಂಬದೊಡನೆ! ಒಂದು ಬಿಂಬ ಇನ್ನೊಂದರ ಜತೆ, ಒಂದು ನೆನಪು ಒಂದು

ಅನುಭವ ಇನ್ನೊಂದರ ಜತೆ ಸಂಬಂಧ ಹೊಂದಿದೆ. ಈ ಬಿಂಬದ ಬಗ್ಗೆ ಅರಿವು ಮೂಡಿದಾಗ ಸಂಬಂಧವೆಂಬುದು ತೀರ ಭಿನ್ನವಾಗಿ ಬಿಡುತ್ತದೆ. ಈಗ ಇರುವ ಹಾಗೆ ತಥಾಕಥಿತ ಸಂಬಂಧವೇ ಇರಲಿಕ್ಕಿಲ್ಲ.

ಎಲ್ಲಿಯತನಕ ಮನಸ್ಸಿನಲ್ಲಿ ಪ್ರಜ್ಞೆಯ ನೆಲೆಯಲ್ಲಿ ಅಥವಾ ಸುಪ್ತ ಪ್ರಜ್ಞೆಯ ನೆಲೆಯಲ್ಲಿ ದುಃಖವಿರುತ್ತದೋ ಅಲ್ಲಿಯತನಕ ಮನಃಶಾಂತಿ ಇರುವುದಿಲ್ಲ. ಮನಸ್ಸು ಸ್ಥಿರವಾಗಿರುವುದಿಲ್ಲ. ಎಲ್ಲಿ ಚೆಲುವು ಮತ್ತು ಒಲವು ಇರುತ್ತದೋ ಅಲ್ಲಿ ಮನಸ್ಸಿನ ಸ್ಥಿರತೆ ಕಂಡುಬರುತ್ತದೆ. ನೀವು ಚೆಲುವನ್ನು ಒಲವಿನಿಂದ ಪ್ರತ್ಯೇಕಿಸಲಾರಿರಿ. ಚೆಲುವು ಆಭರಣವಲ್ಲ; ಅಲಂಕಾರವಲ್ಲ, ಅದು ಸದಭಿರುಚಿಯೂ ಅಲ್ಲ. ಅದು ಬೆಟ್ಟಗಳ ಸಾಲಿನಲ್ಲಾಗಲಿ ವಾಸ್ತುಶಿಲ್ಪದಲ್ಲಾಗಲಿ ಇಲ್ಲ. ಪ್ರೇಮವೆಂದರೆ ಏನು ಎಂದು ನೀವು ತಿಳಿದಾಗ ಚೆಲುವು ಇರುತ್ತದೆ. ಎಲ್ಲಿ ಧೀಮಂತಿಕೆ, ಸಂಯಮ ಮತ್ತು ವ್ಯವಸ್ಥೆ ಇಲ್ಲವೋ ಅಲ್ಲಿ ಪ್ರಾಯಃ ಪ್ರೇಮವೆಂದರೇನು ಎಂದು ನೀವು ಅರಿಯಲಾರಿರಿ. ಧೀಮಂತಿಕೆಯನ್ನು ನಿಮಗೆ ಯಾರೂ ಕೊಡಲಾರರು, ಸಂತ, ದೇವರು, 'ಮಹಾತ್ಮಾ' ಯಾರೂ ನಿಮಗೆ ಕೊಡಲಾರರು? ಜಗತ್ತಿನ 'ಯಾವುದೇ' ಶಕ್ತಿ ನಿಮಗೆ ಅದನ್ನು ಕೊಡಲಾರದು.

ನೀವು ಮಾನವರಾಗಿ ಈ ಒಟ್ಟು ರಚನೆಯನ್ನು - ನಿಮ್ಮ ನಿತ್ಯಜೀವನದ ರಚನೆ ಮತ್ತು ಸ್ವರೂಪವನ್ನು - ಅರ್ಥ ಮಾಡಿಕೊಳ್ಳಬೇಕು. ನೀವು ಏನು ಮಾಡುತ್ತೀರಿ, ಏನು ಯೋಚನೆ ಮಾಡುತ್ತೀರಿ, ನಿಮ್ಮ ಪ್ರೇರಣೆ, ಉದ್ದೇಶಗಳೇನು, ನೀವು ಹೇಗೆ ವರ್ತಿಸುತ್ತೀರಿ, ನೀವು ಹೇಗೆ ನಿಮ್ಮದೇ ತೀರ್ಮಾನಗಳಲ್ಲಿ ನಿಮ್ಮದೇ ಅನುಬಂಧನದಲ್ಲಿ ಸಿಲುಕಿದ್ದೀರಿ ಎಂಬುದನ್ನು ಅರಿಯಬೇಕು. ಅದು ಅಲ್ಲಿ ನಿತ್ಯಜೀವನದಲ್ಲಿ ಆರಂಭವಾಗ ಬೇಕು. ನೀವು ಅದನ್ನು ಪೂರ್ಣವಾಗಿ ಬದಲಿಸಲು ಸಾಧ್ಯವಿಲ್ಲದಿದ್ದರೆ ನಿಮ್ಮಲ್ಲೆ ಪೂರ್ಣ ಪರಿವರ್ತನೆ ಮಾಡಿಕೊಳ್ಳಲಾಗದಿದ್ದರೆ ನೀವೆಂದೂ ಆ ನಿಶ್ಚಲ ಮನಸ್ಸನ್ನು ಅರಿಯಲಾರಿರಿ. ಆ ಸ್ಥಿರ ಮನಸ್ಸು ಮಾತ್ರವೇ ಅದನ್ನು ಕಂಡು ಹಿಡಿಯಬಹುದು, ಆ ಸ್ಥಿರ ಮನಸ್ಸಿಗೆ ಮಾತ್ರವೇ ಸತ್ಯ ಏನೆಂದು ತಿಳಿದಿರುವುದು. ಏಕೆಂದರೆ ಆ ನಿಶ್ಚಲ ಮನಸ್ಸಿಗೆ ಕಲ್ಪನಾ ಶಕ್ತಿಯಿಲ್ಲ, ಅದು ತನ್ನ ಕಾಮನೆಗಳನ್ನು ಪ್ರಕ್ಷೇಪಿಸುವುದಿಲ್ಲ. ಅದೊಂದು ನಿಶ್ಚಲ ಮನಸ್ಸು. ಹಾಗಿದ್ದಾಗ ಮಾತ್ರವೇ ಶಬ್ದಾತೀತವಾದ ಆ ಕೃಪಾಶೀರ್ವಾದವಿರಲು ಸಾಧ್ಯ.

---

ಕೃತಿ: ಜೀವನ ಪಾಠಗಳು

ಮೂಲ: **Teachings of life** (Is there such a thing as security?)

ಅನುವಾದ: ಮಹಾಬಲೇಶ್ವರ ರಾವ್

## Retreat Schedule 2025

| | | | |
|---|---|---|---|
| Sept 4 | - | 7 | What is Holistic Education? |
| Oct 9 | - | 12 | Understanding Emotions – Hurt, Frustration & Anger |
| Nov 6 | - | 9 | Exploring Happiness & the pursuit of pleasure |

# ಚಿಕ್ಕಮಗಳೂರಿನ ಶಾಲೆಯ ಶಿಬಿರದ ವರದಿ

ಚಿಕ್ಕಮಗಳೂರು ಅಕ್ಷಯ ಪಬ್ಲಿಕ್ ಶಾಲೆಯಲ್ಲಿ ೧೨/೧೩ ಜುಲೈ ೨೦೨೫ರಂದು ಬೆಂಗಳೂರಿನ ಕೃಷ್ಣಮೂರ್ತಿ ಅಧ್ಯಯನ ಕೇಂದ್ರದಿಂದ ಶಿಬಿರ ಆಯೋಜಿಸಲಾಗಿತ್ತು "ಶಿಕ್ಷಕರಿಗೆ ಶಿಕ್ಷಣ ಹಾಗೂ ಭಯಮುಕ್ತ ಶಾಲೆ" ವಿಷಯದ ಮೇಲೆ ಶಿಬಿರ ಅರ್ಥಪೂರ್ಣವಾಗಿ ನೆರವೇರಿತು. “ಪ್ರಾರಂಭದಿಂದಲೂ ಜೆ ಕೃಷ್ಣಮೂರ್ತಿ ಜಗತ್ತಿನಲ್ಲಿ ಆಗಬೇಕಾದ ಯಾವುದೇ ಬದಲಾವಣೆಯು, ಸರಿಯಾದ ರೀತಿಯ ಶಿಕ್ಷಣದಿಂದಲೇ ಪ್ರಾರಂಭವಾಗಬೇಕು ಎಂಬುದನ್ನು ಸೂಚಿಸುತ್ತಿದ್ದರು. ಶಿಕ್ಷಣವು ಕೇವಲ ಮಕ್ಕಳು ಮತ್ತು ಯುವಜನರಿಗಾಗಿ ಮಾತ್ರವಲ್ಲ, ಅದು ಇನ್ನೂ ಮುಖ್ಯವಾಗಿ ಶಿಕ್ಷಕರು ಮತ್ತು ಪೋಷಕರಿಗಾಗಿ ಎಂಬುದು ಅವರ ಸ್ಪಷ್ಟವಾದ ವಿಚಾರವಾಗಿತ್ತು.”

### ಅಕ್ಷಯ ಪಬ್ಲಿಕ್ ಶಾಲೆಯ ಪ್ರಾಂಶುಪಾಲರ ಅನಿಸಿಕೆ:

ಶಿಬಿರದಲ್ಲಿ ಭಾಗವಹಿಸಿದ್ದ ಶಾಲಾ ಶಿಕ್ಷಕರಿಗೆ ಇದು ಹೊಸದಾಗಿ ತೋರಿದ ಹಾಗೂ ಮನಸ್ಸು ಸೆಳೆಯುವ ಅನುಭವವಾಗಿತ್ತು. ಶಾಲೆಯ ಶಿಕ್ಷಕರಿಗೆ ಇದು ಹೊಸದಾಗಿ ಕಂಡದ್ದು ಮಾತ್ರವಲ್ಲ, ದೈನಂದಿನ ಶಿಕ್ಷಣ ಪ್ರಕ್ರಿಯೆಯಲ್ಲಿ ತಾವು ಹೇಗೆ ರೂಪಿತರಾಗಿದ್ದೇವೆ ಎಂಬುದರ ಕುರಿತು ಗಂಭೀರವಾದ ಚಿಂತನೆಗೆ ದಾರಿ ಮಾಡಿಕೊಟ್ಟಿತು. ಖಾಸಗಿ ಮತ್ತು ಸಾಮಾಜಿಕ ಮಟ್ಟದಲ್ಲಿ ಹುಟ್ಟುವ ಮನಸ್ಸಿನ ಶರತುಬದ್ಧತೆ ಕುರಿತು ಸ್ಪಷ್ಟವಾದ ಒಳನೋಟ ಈ ಸಂವಾದ ನೀಡಿತು. ಹಲವರು ಮೊದಲ ಬಾರಿಗೆ ತಮ್ಮ ಅಭಿಪ್ರಾಯಗಳು ಮತ್ತು ಶೈಕ್ಷಣಿಕ ಕ್ರಮಗಳು ಹೇಗೆ ರೂಪುಗೊಳ್ಳುತ್ತವೆ ಎಂಬುದನ್ನು ಪ್ರಶ್ನಿಸುವಂತೆ ಇದೊಂದು ಆತ್ಮಚಿಂತನೆಯ ಪ್ರೇರಣೆಯಾಗಿ ಪರಿಣಮಿಸಿತು. ಶಿಬಿರದ ತೀವ್ರ ಆಸಕ್ತಿ ಮತ್ತು ಪ್ರೇರಣೆಯಿಂದ, ಶಾಲೆಯ ವ್ಯವಸ್ಥಾಪಕರು ಪ್ರತೀ ಹದಿನೈದು ದಿನಕ್ಕೊಮ್ಮೆ ಶಾಲೆಯಲ್ಲೇ ಒಂದು ಸಂವಾದವನ್ನು ನಡೆಸುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ.

ಈ ಅನುಭವದಿಂದಾಗಿ ಶಾಲೆಯ ವಾತಾವರಣದಲ್ಲಿ ಹೊಸ ಚರ್ಚೆಗಳು ಆರಂಭವಾಗಿದ್ದು, ಕೆಲವರು ಸ್ವತಃ ತಮ್ಮನ್ನು ಮತ್ತು ವಿದ್ಯಾರ್ಥಿಗಳನ್ನು ಗಮನದಿಂದ ಸ್ವಯಂ ವೀಕ್ಷಿಸುತ್ತಿದ್ದಾರೆ. ಈ ಶಿಬಿರವು ಕೇವಲ ಬೌದ್ಧಿಕ ಮಟ್ಟದಲ್ಲಿ ಅಲ್ಲದೆ ಅಂತರಂಗದ ಅವಲೋಕನದತ್ತ ಎಡೆಮಾಡಿದ ಪರಿಣಾಮಕಾರಿ ಸಂವಾದವಾಗಿತ್ತು.

Principal
Akshaya Public School

ಸಂವೇದನಾಶೀಲವಾಗುವುದೆಂದರೆ ಸುಂದರವಾದುದೆಲ್ಲದರ ಬಗ್ಗೆ ಜಾಗೃತ ವಾಗಿರುವುದಷ್ಟೇ ಅಲ್ಲದೆ ಕುರೂಪದ ಬಗ್ಗೆಯೂ ಜಾಗೃತವಾಗಿರುವುದು. ನದಿ, ಹಸಿರು ಹೊಲಗಳು, ದೂರದ ಮರಗಳು, ಸಂಜೆಯ ಮೋಡಗಳು - ಇವೆಲ್ಲವನ್ನೂ ನಾವು ಸುಂದರ ಎನ್ನುತ್ತೇವೆ. ಕೊಳಕಾದ, ಅರೆಹೊಟ್ಟೆಯ ಹಳ್ಳಿಗರು, ಕೊಳೆ ಕಸ ಗಲೀಜಿನಲ್ಲಿ ಬದುಕುವವರು ಅಥವಾ ವಿಚಾರಶೂನ್ಯರು, ಭಾವಶೂನ್ಯರು ಇವೆಲ್ಲವನ್ನೂ ನಾವು ಕುರೂಪ ಅನ್ನುತ್ತೇವೆ. ಈಗ ನೀವು ಸೂಕ್ಷ್ಮವಾಗಿ ಗಮನಿಸಿದರೆ ನಮ್ಮಲ್ಲಿ ಹೆಚ್ಚಿನವರು ಚೆಲುವಿಗೆ ಅಂಟಿಕೊಂಡು ಕುರೂಪವನ್ನು ದೂರ ತಳ್ಳುತ್ತೇವೆ. ಕುರೂಪ ಹಾಗೂ ಚೆಲುವು ಎರಡಕ್ಕೂ ಸಂವೇದನಾಶೀಲರಾಗಿರುವುದು ಮುಖ್ಯವಲ್ಲವೆ? ಈ ಸಂವೇದನಾಶೀಲತೆಯ ಕೊರತೆಯೇ ಜೀವನವನ್ನು ಕುರೂಪ ಹಾಗೂ ಚೆಲುವು ಎಂದು ವಿಭಜಿಸುವ ಹಾಗೆ ಮಾಡುತ್ತದೆ. ಆದರೆ ನಾವು ತೆರೆದ ಮನಸ್ಸಿನಿಂದಿದ್ದರೆ, ಕುರೂಪ ಹಾಗೂ ಚೆಲುವಿಗೆ ಸಂವೇದನೆ ಉಳ್ಳವರಾಗಿದ್ದರೆ ಆಗ ಅವೆರಡೂ ಅರ್ಥಪೂರ್ಣವೆಂದು ಗಮನಿಸುತ್ತೇವೆ. ಈ ಪರಿಗ್ರಹಿಕೆಯೇ ಬದುಕನ್ನು ಶ್ರೀಮಂತಗೊಳಿಸುತ್ತದೆ.



# ಕನ್ನಡದಲ್ಲಿ ಲಭ್ಯವಿರುವ ಜೆ.ಕೃಷ್ಣಮೂರ್ತಿ ಪುಸ್ತಕಮಾಲೆ

**೧. ಜೆ.ಕೆ. ಜೀವನ – ದರ್ಶನ*** ರೂ.೧೩೦/-
ಅನು. ಡಾ. ನಿ. ಮುರಾರಿ ಬಲ್ಲಾಳ

**೨. ಧ್ಯಾನ ಚಿಂತನ** ರೂ. ೫೦/-
ಅನು. ಡಾ. ನಿ. ಮುರಾರಿ ಬಲ್ಲಾಳ

**೩. ಶಿಕ್ಷಣ ಮತ್ತು ಜೀವನ*** ರೂ. ೬೫/-
ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್

**೪. ಅನುದಿನ ಚಿಂತನ** ರೂ.೪೦೦/-
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ

**೫. ಹಿಂಸೆಯನ್ನು ಮೀರಿ** ರೂ.೧೫೦/-
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ

**೬. ಭಯ, ಸ್ವಾತಂತ್ರ್ಯ ಮತ್ತು ಶಿಕ್ಷಣ** ರೂ.೨೦/-
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ

**೭. ಬಾಳಿಗೊಂದು ಭಾಷ್ಯ - ಸಂಪುಟ ೧** ರೂ.೩೨೦/-
ಅನು. ಡಾ. ಮಹಾಬಲೇಶ್ವರ ರಾವ್

**೮. ಬಾಳಿಗೊಂದು ಭಾಷ್ಯ - ಸಂಪುಟ ೨*** ರೂ.೧೫೦/-
ಅನು. ಡಾ. ಮಹಾಬಲೇಶ್ವರ ರಾವ್

**೯. ಬಾಳಿಗೊಂದು ಭಾಷ್ಯ - ಸಂಪುಟ ೩*** ರೂ.೧೮೫/-
ಅನು. ಡಾ. ಮಹಾಬಲೇಶ್ವರ ರಾವ್

**೧೦. ಮೊದಲ ಹಾಗೂ ಕೊನೆಯ ಬಿಡುಗಡೆ** ರೂ.೩೫೦/-
ಅನು. ರುಕ್ಮಿಣಿ ಕೃಷ್ಣಮೂರ್ತಿ

**೧೧. ಭಯ ನಿಮಗೇನು ಮಾಡೀತು?** ರೂ.೪೦/-
ಅನು. ಎಸ್. ದಿವಾಕರ್

**೧೨. ಇನ್ನೊಬ್ಬರ ಬಗ್ಗೆ ಕಾಳಜಿ - ಹಾಗೆಂದರೇನು?** ರೂ.೪೦/-
ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್

**೧೩. ಸ್ವಾತಂತ್ರ್ಯ ಎಂದರೇನು?** ರೂ.೪೦/-
ಅನು. ಗಿರೀಶ್ ವಾಘ್

**೧೪. ಶಿಕ್ಷಣ*** ರೂ.೯೦/-
ಅನು. ಎಸ್.ಡಿ. ಕಾಶೀಕರ

**೧೫. ಬದುಕಿನ ಕಡೆಗೆ** ರೂ.೧೪೦/-
ಅನು. ಎಸ್.ಡಿ. ಕಾಶೀಕರ ಮತ್ತು
ವನಮಾಲಾ ಆರ್. ರಾವ್

**೧೬. ನೀವೇ ಲೋಕ, ನಿಮ್ಮೊಳಗೇ ಲೋಕ** ರೂ. ೧೦೦/-
ಅನು. ಡಾ. ಮಹಾಬಲೇಶ್ವರ ರಾವ್

**೧೭. ಒಲವು ಒಂಟಿತನ** ರೂ.೧೫೦/-
ಅನು. ಡಾ. ಮಹಾಬಲೇಶ್ವರ ರಾವ್

**೧೮. ಸಂಕಷ್ಟಮಯ ಜಗತ್ತಿನ ಜೊತೆ ಮುಖಾಮುಖಿ** ರೂ.೧೫೦/-
ಅನು. ಡಾ. ಮಹಾಬಲೇಶ್ವರ ರಾವ್

**೧೯. ಒಳಜಗತ್ತು** ರೂ.೧೮೦/-
ಅನು. ಡಾ. ಮಹಾಬಲೇಶ್ವರ ರಾವ್

**೨೦. ಸಾಮಾಜಿಕ ಜವಾಬ್ದಾರಿ** ರೂ.೧೧೦/-
ಅನು. ಡಾ. ಮಹಾಬಲೇಶ್ವರ ರಾವ್

**೨೧. ಶಿಕ್ಷಕನಿಗೆ ಶಿಕ್ಷಣ** ರೂ. ೫೦/-
ಅನು. ಡಾ. ಬಿ.ಬಿ. ರಾಜಪುರೋಹಿತ್

**೨೨. ನಿಮ್ಮ ಜೀವನ ನಿಮ್ಮ ಕೈಯಲ್ಲಿದೆಯೆ?** ರೂ.೨೦೦/-
ಅನು. ಡಾ. ಮಹಾಬಲೇಶ್ವರ ರಾವ್

**೨೩. ಲೋಕ ಶಿಕ್ಷಕ** ರೂ.೨೫೦/-
ಅನು. ಡಾ. ಮಹಾಬಲೇಶ್ವರ ರಾವ್

**೨೪. ಕೃಷ್ಣಮೂರ್ತಿ ಆತ್ಮಸಂಗಾತ** ರೂ.೧೩೦/-
ಅನು. ಡಾ. ಮಹಾಬಲೇಶ್ವರ ರಾವ್

**೨೫. ಮುಗಿದ ಶಾಲೆ ತೆರೆದ ಜೀವನ** ರೂ.೨೧೦/-
ಅನು. ಡಾ. ಮಹಾಬಲೇಶ್ವರ ರಾವ್

**೨೬. ಈ ಸಂಗತಿ ಕುರಿತು ಆಲೋಚನೆ ಮಾಡಿ** ರೂ.೩೫೦/-
ಅನು. ಎಚ್ ಎಸ್ ರಾಘವೇಂದ್ರರಾವ್

*ನಮ್ಮಲ್ಲಿ ಪುಸ್ತಕಗಳು ರಿಯಾಯಿತಿ ಬೆಲೆಗಳಲ್ಲಿ ಲಭ್ಯವಿರುತ್ತವೆ.*

- ಕನ್ನಡ ಪುಸ್ತಕಗಳು 20% ರಿಯಾಯಿತಿ ಬೆಲೆಯಲ್ಲಿ ಸಿಗುತ್ತವೆ.
- ಆಂಗ್ಲ ಪುಸ್ತಕಗಳು 40% ರಿಯಾಯಿತಿ ಬೆಲೆಯಲ್ಲಿ ಸಿಗುತ್ತವೆ.
- * KFI ಪ್ರಕಟಿತ ಕನ್ನಡ ಪುಸ್ತಕಗಳು 60% ರಿಯಾಯಿತಿಯಲ್ಲಿ ಲಭ್ಯವಿರುತ್ತವೆ.

**ಕನ್ನಡ ಭಾಷಾಂತರ ಸಮಿತಿ ಸದಸ್ಯರು:**
ಡಾ|| ಎಚ್. ಎಸ್. ರಾಘವೇಂದ್ರರಾವ್
ಪ್ರೊ|| ಓ. ಎಲ್. ನಾಗಭೂಷಣ ಸ್ವಾಮಿ
ಡಾ|| ವನಮಾಲಾ ವಿಶ್ವನಾಥ್

**Published by:**
Editor: Arun N Haunshi
The Study Bengaluru Education Centre
Krishnamurti Foundation India
Thataguni post, Bengaluru-560082

**Contact Information:**
Mob: 8317419451
Email: kfistudy@gmail.com
Website: www.kfistudy.org